ಹಾಗೂ ಧಾರವಾಡದಲ್ಲಿ ಈಗಾಗಲೇ ಪತ್ರಾಗಾರ ಘಟಕವನ್ನು ಸ್ಥಾಪಿಸಿರುವಂತೆ ರಾಜ್ಯದ ಇತರ ಸ್ಥಳಗಳಲ್ಲೂ ಪತ್ರಾಗಾರ ಘಟಕಗಳನ್ನು ಹಂತ ಹಂತವಾಗಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಸಾಲಿನಲ್ಲಿ ಬಳ್ಳಾರಿ, ಶಿವಮೊಗ್ಗ ಮತ್ತು ಮಂಗಳೂರುಗಳಲ್ಲಿ ಪತ್ರಾಗಾರ ಘಟಕಗಳನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಒಳನಾಡು ಮೀನುಗಾರಿಕೆಗೆ ಒದಗಿಸಲಾದ ಸೌಲಭ್ಯಗಳು

1730 (2394) ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ): ಮಾನ್ಯ ಮೀನುಗಾರಿಕೆ - ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಳನಾಡು ಮೀನುಗಾರಿಕೆಯನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಯಾವ ಯಾವ ಪ್ರದೇಶಗಳಲ್ಲಿ ಪ್ರೋತ್ಸಾಹಿಸಲಾಗಿದೆ;

ಆ) ಒಳನಾಡು ಮೀನು ವ್ಯವಸಾಯಗಾರರಿಗೆ ನೀಡುತ್ತಿರುವ ವಿವಿಧ ಸೌಲಭ್ಯಗಳೇನು?

ಶ್ರೀ ಬಿ.ರಮಾನಾಥ ರೈ, (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು).

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಕಾರ್ಕಳ ತಾಲ್ಲೂಕುಗಳಲ್ಲಿ ಹಾಗೂ ಮಂಗಳೂರು,ಉಡುಪಿ ಮತ್ತು ಕುಂದಾಪುರ ತಾಲೂಕಿನ ಒಳನಾಡು ಪ್ರದೇಶಗಳಲ್ಲಿ ಒಳನಾಡು ಮೀನುಗಾರಿಕೆಯನ್ನು ಪ್ರೋತ್ಸಾಹಿಸಲಾಗುತ್ತಿದೆ.

ಆ) ಒಳನಾಡು ಪ್ರದೇಶಗಳಲ್ಲಿ ಮೀನು ಕೃಷಿಕೊಳ ನಿರ್ಮಾಣಕ್ಕೆ ಸಹಾಯಧನ, ಸಲಕರಣೆಕೊಳ್ಳಲು ಸಹಾಯಧನ ಕೆರೆಕೊಳಗಳಲ್ಲಿ, ಸಿಹಿನೀರು ಮೀನು ಮತ್ತು ಸಿಗಡಿ ವ್ಯವಸಾಯಕ್ಕೆ ಪ್ರೋತ್ಸಾಹ, ಬಾವಿ, ಹೊಂಡಗಳಲ್ಲಿ ಮೀನು ಕೃಷಿಗೆ ಸಹಾಯಧನಗಳನ್ನು ನೀಡಲಾಗುತ್ತಿದೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿಯ ಪ್ರವಾಸಿ ಕೇಂದ್ರಗಳು

1731 (2395) ಶ್ರೀ ಕೆ.ಪ್ರಭಾಕರ ಬಂಗೇರ (ಬೆಳ್ತಂಗಡಿ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ನರಸಿಂಹಗಡ, ಧರ್ಮಸ್ಥಳ ಹಾಗೂ ಶಿಶಿಲ (ಮತ್ಸ್ಯಧಾಮ) ಗಳನ್ನು ಸರ್ಕಾರವು ಪ್ರವಾಸಿ ಕೇಂದ್ರಗಳು ಎಂದು ಘೋಷಿಸಿದೆಯೆ ಇಲ್ಲವಾದಲ್ಲಿ ಆ ಕುರಿತು ಇರುವ ಕಾರಣಗಳೇನು;

ಆ) ಈ ಮೂರು ಕೇಂದ್ರಗಳು ಅತ್ಯಂತ ಪ್ರಸಿದ್ಧ ಕ್ಷೇತ್ರಗಳಾಗಿದ್ದು ಅವುಗಳನ್ನು ಪ್ರವಾಸಿ ಕೇಂದ್ರವೆಂದು ಘೋಷಿಸಿ ಸೂಕ್ತ ಸೌಲಭ್ಯಗಳನ್ನು ಒದಗಿಸಿಕೊಡಲು ಸರ್ಕಾರವು ಕ್ರಮ ಜರುಗಿಸುವುದೆ?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು).

ಆ) ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳ, ಸಿಸಿಲ, (ಮತ್ಸ್ಯಧಾಮ) ಗಳನ್ನು ಪ್ರವಾಸಿ ಕೇಂದ್ರಗಳೆಂದು ಗುರುತಿಸಲಾಗಿದೆ.

ಅ) ಸದ್ಯಕ್ಕೆ ಯಾವುದೇ ಪ್ರಸ್ತಾವನೆಗಳು ಇಲಾಖೆಯ ಮುಂದೆ ಇರುವುದಿಲ್ಲ.

ಪಶುಗಳ ಕೃತಕ ಗರ್ಭಧಾರಣೆ

1731 (2182) ಶ್ರೀ ಪಾಟೀಲ್ ಡಿ.ಆರ್.(ಗದಗ್): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃತಕ ಗರ್ಭಧಾರಣೆ ಕಾರ್ಯಕ್ರಮದಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೃತಕ ಗರ್ಭಧಾರಣೆ ಮಾಡಿಸಿದ ಪಶುಗಳೆಷ್ಟು;

ಆ) ಇದರಲ್ಲಿ ಗರ್ಭಧಾರಣೆ ಮಾಡಿದ ಪಶುಗಳೆಷ್ಟು;

ಇ) ಈ ಕೃತಕ ಗರ್ಭಧಾರಣೆಯ ಯಶಸ್ಸಿನ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ನಮ್ಮ ರಾಜ್ಯದಲ್ಲಿ ಬಾಯ್‌ಫ್ ಸಂಸ್ಥೆ ಮೂರು ವರ್ಷಗಳಲ್ಲಿ ಗರ್ಭಧಾರಣೆ ಕೈಗೊಂಡ ಪಶುಗಳೆಷ್ಟು;

ಉ) ಈ ಸಂಸ್ಥೆಯಿಂದ ಯಶಸ್ಸಿನ ಪ್ರಮಾಣ ಏನು;

ಊ) ಅದರ ಪ್ರಯೋಗದ ಪ್ರತಿಫಲದಿಂದ ಸರ್ಕಾರ ಏನಾದರೂ ತನ್ನ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಲು ಯೋಜಿಸಿದೆಯೇ;

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು).

ಅ)

ವರ್ಷ	ಕೃತಕ ಗರ್ಭಧಾರಣೆ ಮಾಡಿದ ರಾಸುಗಳ ಸಂಖ್ಯೆ
96-97	12,34,100
97-98	13,64,966
98-99	13,66,969
ಒಟ್ಟು	39,66,035

ಆ)

96-97	4,31,416
97-98	4,11,517
98-99	4,68,596
ಒಟ್ಟು	13,11,529

ಇ) 1. ವೀರ್ಯದ ಗುಣಮಟ್ಟವನ್ನು ಹೆಚ್ಚಿಸಲು ಪ್ರಯೋಗಶಾಲೆಗಳನ್ನು ಆತ್ಯಾಧುನಿಕ ಸಂಸ್ಕರಣಾ